Date : 18-9-2015

# ಭಾರತದಲ್ಲಿ ಹತ್ತಿ 400 ಲಕ್ಷ ಬೇಲ್‌ಗಳ ಬಂಪರ್ ಬೆಳೆಯ ನಿರೀಕ್ಷೆ

ಮುಂಗಾರು ಮಳೆಯ ಪುನರಾಗಮನದಿಂದ ಭಾರತದ ಹತ್ತಿ ಬೆಳೆಯುವ ಪ್ರಮುಖ ಪ್ರದೇಶಗಳಲ್ಲಿ ಸಾಕಷ್ಟು ಮಳೆಯಾಗಿದೆಯೆನ್ನಲಾಗಿದ್ದು ಇದು ಮಹಾರಾಷ್ಟ್ರದ ಮರಾಠವಾಡ, ವಿದರ್ಭ ಹಾಗೂ ದೇಶದ ಇತರ ಭಾಗಗಳ ಹತ್ತಿ ಬೆಳೆಯ ಮೇಲೆ ಧನಾತ್ಮಕ ಪರಿಣಾಮ ಬೀರಲಿದೆಯೆನ್ನಲಾಗಿದೆ. ಭಾರತದಲ್ಲಿ ಈ ವರ್ಷ ಬಂಪರ್ ಹತ್ತಿ ಬೆಳೆ ಉತ್ಪಾದನೆಯಾಗಿ ಸುಮಾರು 400 ಲಕ್ಷ ಬೇಲ್‌ಗಳಷ್ಟು ಉತ್ಪಾದನೆಯಾಗಬಹುದೆಂದು ಕೈಗಾರಿಕಾ ಪರಿಣತರು ಅಭಿಪ್ರಾಯ ಪಡುತ್ತಾರೆ. (1 ಬೇಲ್ ತಲ 170 ಕಿಲೋ ಗ್ರಾಂ). 120 ಲಕ್ಷ ಹೆಕ್ಟೇರ್‌ಗಳಲ್ಲಿ ಈ ವರ್ಷ ಹತ್ತಿ ಬೆಳೆಯಾಗಲಾಗುತ್ತಿದೆ ಎನ್ನಲಾಗಿದೆ. ಕೇಂದ್ರೀಯ ಹತ್ತಿ ಸಂಶೋಧನಾ ಕೇಂದ್ರದ ಡೈರೆಕ್ಟರ್ ಡಾ। ಕ್ರಾಂತಿಯವರು ತೆಲಂಗಾಣ, ಮೆಹಬೂಬ್‌ನಗರಗಳನ್ನುಳಿದು ದೇಶದ ಇತರೆಡೆ ಹತ್ತಿ ಬೆಳೆ ಉತ್ತಮವಾಗಿದೆಯೆಂದು ಫೈನಾನ್ಸಿಯೆಲ್ ಎಕ್ಸ್‌ಪ್ರೆಸ್‌ಗೆ ತಿಳಿಸಿದ್ದಾರೆನ್ನಲಾಗಿದೆ. ಹವಾಮಾನ ವರದಿ ಪ್ರಕಾರ ಮಳೆಯ ಪುನರಾಗಮನವಾಗಿದ್ದು, ಅಕ್ಟೋಬರ್ ತಿಂಗಳ ತನಕವೂ ಮಳೆಯಾಗಲಿದೆಯೆನ್ನಲಾಗಿದೆ. ಕರ್ನಾಟಕದ ಉತ್ತರ ಒಳನಾಡು ಮತ್ತು ತೆಲಂಗಾಣಗಳನ್ನುಳಿದು, ದೇಶದೆಲ್ಲೆಡೆ ಹಾಗೂ ಮಹಾರಾಷ್ಟ್ರದ ಕೇಂದ್ರ ಭಾಗಗಳಲ್ಲೂ ಮಳೆ ಉತ್ತಮವಿದೆಯೆನ್ನಲಾಗಿದೆ. ಕಾಟನ್ ಅಸೋಸಿಯೇಶನ್ ಆಫ್ ಇಂಡಿಯಾ ಈ ವರ್ಷದ ಹತ್ತಿ ಉತ್ಪಾದನೆ (2015–16) ಅಕ್ಟೋಬರ್ ಆರಂಭದಲ್ಲಿ 38 ಮಿಲಿಯನ್ ಬೇಲ್‌ಗಳಾಗಲಿದೆಯೆಂದು ಅಂದಾಜಿಸಿದೆ. ಏಕರೇಜ್ ಕಡಿಮೆಯಾದರೂ ಹೆಚ್ಚಿನ ಫಸಲಿನ ನಿರೀಕ್ಷೆ ಇದೆ.